- **ಕಾಂಡ ಕೊರೆಯುವ ಹುಳು:** ಮರಿ ಹುಳು ಕಾಂಡವನ್ನು ಕೊರೆದು ಸುಳಿ ಒಣಗುವಂತೆ ಮಾಡುತ್ತದೆ. ಪೈರು ತೆನೆ ಹಂತದಲ್ಲಿದ್ದಾಗ ಬಿಳಿ ತೆನೆಗಳಾಗುತ್ತವೆ.

ನಿರ್ವಹಣಾ ಕ್ರಮಗಳು: ಸಸಿಗಳನ್ನು ನಾಟಿ ಮಾಡುವ ಮುಂಚೆ ತುದಿಗಳನ್ನು ಚಿವುಟಿ, ಕ್ಲೋರ್‌ಪೈರಿಫಾಸ್ 20 ಇಸಿ. ಕೀಟನಾಶಕ 2.0 ಮಿ.ಲೀ. ಪ್ರತಿ ಲೀಟರ್ ನೀರಿನ ದ್ರಾವಣದಲ್ಲಿ ಬೇರುಗಳನ್ನು ಅದ್ದಿ ನಾಟಿ ಮಾಡಬೇಕು. ಕಾಂಡಕೊರೆಯುವ ಹುಳದ ಬಾಧೆ ಹೆಚ್ಚಾಗಿರುವ ಪ್ರದೇಶದಲ್ಲಿ ಎಕರೆಗೆ 10 ಕಿ.ಗ್ರಾಂ. ಫಿಪ್ರೊನಿಲ್ 0.3 ಜಿ ಹರಳುಗಳನ್ನು ಬತ್ತನೆಗೆ ಮುಂಚೆ ಮಣ್ಣಿನಲ್ಲಿ ಬೆರೆಸಿ ನೀರನ್ನು ಹಾಯಿಸಿ ಅಥವಾ 2 ಮಿ.ಲೀ. ಕ್ಲೋರ್‌ಪೈರಿಫಾಸ್ 20 ಇಸಿ ಯನ್ನು ಒಂದು ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು.

- **ಎಲೆ ಸುರಳಿ ಹುಳು:** ಮರಿ ಹುಳು ಎಲೆಯನ್ನು ಸುರಳಿ ಮಾಡಿ ಒಳಗಡೆ ಇದ್ದು, ಹಸಿರು ಭಾಗವನ್ನು ಕೆರೆದು ತಿನ್ನುವುದರಿಂದ ಎಲೆಗಳ ಮೇಲೆ ಬಿಳಿ ಪಟ್ಟಿಗಳು ಕಾಣುತ್ತವೆ.

ನಿರ್ವಹಣಾ ಕ್ರಮಗಳು: ಈ ಕೀಟ ಬಾಧೆ ಕಂಡು ಬಂದಲ್ಲಿ ಪ್ರೊಪೆನೋಫಾಸ್ 50 ಇಸಿ.ಯನ್ನು ಒಂದು ಲೀಟರ್ ನೀರಿಗೆ 2 ಮಿ.ಲೀ. ನಂತೆ ಸೇರಿಸಿ ಸಿಂಪಡಿಸಬೇಕು.

- **ಮುಳ್ಳು ಚಿಪ್ಪಿನ ಹುಳು:** ಪ್ರೌಢ ಕೀಟವು ಕಪ್ಪು ಬಣ್ಣದಾಗಿದ್ದು, ಮೈ ಮೇಲೆ ಮುಳ್ಳುಗಳನ್ನು ಹೊಂದಿದ್ದು, ಎಲೆಯನ್ನು ಕೆರೆದು ತಿನ್ನುವುದರಿಂದ ಹಳದಿ ಸುರಂಗಗಳನ್ನು ಕಾಣಬಹುದು.

ನಿರ್ವಹಣಾ ಕ್ರಮಗಳು: ಬತ್ತನೆಯಾದ 10–12 ದಿನಗಳ ನಂತರ 1.3 ಮಿ.ಲೀ. ಮೊನೊಕ್ರೊಟೋಫಾಸ್ 36 ಎಸ್. ಎಲ್ ಅಥವಾ 2 ಮಿ.ಲೀ. ಕ್ಲೋರ್‌ಪೈರಿಫಾಸ್ 20 ಇಸಿ. ಅಥವಾ 2 ಮಿ.ಲೀ. ಅಥವಾ 2.0 ಮಿ.ಲೀ. ಕ್ವಿನಾಲ್‌ಫಾಸ್ 25 ಇಸಿ. ಅಥವಾ 1 ಗ್ರಾಂ. ನೊಮೋರಿಯಾ ಶಿಲೀಂಧ್ರ ಪುಡಿಯನ್ನು 1 ಲೀ. ನೀರಿನಲ್ಲಿ ಬೆರೆಸಿ ಬೆಳೆಗೆ ಸಿಂಪಡಿಸಬೇಕು.

ರೋಗಗಳು:

- **ಬೆಂಕಿರೋಗ:** ಎಲೆಯ ಮೇಲೆ ಚಿಕ್ಕ ಕಂದು ಬಣ್ಣದ ಚುಕ್ಕೆಗಳನ್ನು ಕಾಣಬಹುದು. ನಂತರ ಇಂತಹ ಚುಕ್ಕೆಗಳ ಗಾತ್ರ ಹೆಚ್ಚಾಗುತ್ತದೆ. ಚುಕ್ಕೆಯ ಮಧ್ಯಭಾಗವು ಅಗಲವಾಗಿದ್ದು, ಎರಡು ತುದಿಗಳು ಚೂಪಾಗಿರುತ್ತವೆ. ಚುಕ್ಕೆಗಳ ಮಧ್ಯಭಾಗವು ಬೂದಿ ಬಣ್ಣಕ್ಕೆ ತಿರುಗಿದ್ದು, ಕಂದು ಬಣ್ಣದ ಉಂಗುರಗಳಿಂದ ಆವೃತವಾಗಿರುತ್ತದೆ. ಇಂತಹ ಹಲವಾರು ಚುಕ್ಕೆಗಳು ಸೇರಿ ಎಲೆಗಳೆಲ್ಲಾ ಸಂಪೂರ್ಣ ಸುಟ್ಟಂತೆ ಕಾಣಿಸುತ್ತವೆ. ರೋಗದ ಲಕ್ಷಣಗಳು ಎಲೆ, ಗಿಣ್ಣು, ತೆನೆಯ ದೇಟು, ತೆನೆ ಹಾಗೂ ಕಾಳುಗಳ ಮೇಲೆ ಕಾಣಿಸಿಕೊಳ್ಳುತ್ತವೆ.

ನಿರ್ವಹಣಾ ಕ್ರಮಗಳು: ಜೈವಿಕ ನಿಯಂತ್ರಣ: ಪ್ರತಿ ಲೀಟರ್ ನೀರಿಗೆ 10 ಗ್ರಾಂ ಸೂಡೋಮೊನಾಸ್ ಫ್ಲೋರೆಸೆನ್ಸ್ ಬೆರೆಸಿದ ದ್ರಾವಣದಲ್ಲಿ 30 ನಿಮಿಷ ಬೀಜಗಳನ್ನು ನೆನೆಸಿ ಬಿತ್ತಬೇಕು. ನಾಟಿಗೆ ಮುಂಚೆ ಪ್ರತಿ ಲೀಟರ್ ನೀರಿಗೆ 4 ಗ್ರಾಂ. ಸೂಡೋಮೊನಾಸ್ ಫ್ಲೋರೆಸೆನ್ಸ್ ಬೆರೆಸಿದ ದ್ರಾವಣದಲ್ಲಿ ಬೇರುಗಳನ್ನು 20 ನಿಮಿಷ ಅದ್ದಬೇಕು. 20–25 ದಿನಗಳ ನಂತರ ಪ್ರತಿ ಲೀಟರ್ ನೀರಿಗೆ 4 ಗ್ರಾಂ. ಸೂಡೋಮೊನಾಸ್ ಫ್ಲೋರೆಸೆನ್ಸ್ ಬೆರೆಸಿದ ದ್ರಾವಣವನ್ನು ಸಿಂಪಡಿಸಬೇಕು.

ರಾಸಾಯನಿಕ ಕ್ರಮಗಳು: ಪ್ರತಿ ಕಿ.ಗ್ರಾಂ. ಬೀಜಕ್ಕೆ 2 ಗ್ರಾಂ ಕಾರ್ಬನ್‌ಡೈಜಿಮ್ 50 ಡಬ್ಲ್ಯೂಪಿ. ಶಿಲೀಂಧ್ರನಾಶಕದಿಂದ ಬೀಜೋಪಚಾರ ಮಾಡಿ ಬಿತ್ತಬೇಕು. ಹೊಲದಲ್ಲಿ ರೋಗದ ಲಕ್ಷಣಗಳು ಕಾಣಿಸಿದರೆ ಪ್ರತಿ ಲೀಟರ್ ನೀರಿಗೆ 1 ಗ್ರಾಂ ಕಾರ್ಬನ್‌ಡೈಜಿಮ್ 50 ಡಬ್ಲ್ಯೂಪಿ. ಅಥವಾ 0.6 ಗ್ರಾಂ. ಟ್ರೈಸೈಕ್ಲೋಜೋಲ್ 75 ಡಬ್ಲ್ಯೂಪಿ. ಬೆರೆಸಿ ಸಿಂಪಡಿಸಬೇಕು.

- **ಕಂದು ಚುಕ್ಕೆ ರೋಗ:** ಎಲೆ, ಎಲೆ ಹೊದಿಕೆ ಮತ್ತು ಕಾಳಿನ ಮೇಲೆ ಕಂದು ಬಣ್ಣದ ಚುಕ್ಕೆಗಳು ಕಾಣಿಸಿಕೊಳ್ಳುತ್ತವೆ. ಚುಕ್ಕೆಗಳು ಮೊಟ್ಟೆಯಾಕಾರ ಅಥವಾ ಎಳ್ಳಿನ ಆಕಾರವನ್ನು ಹೊಂದಿರುತ್ತವೆ. ಚುಕ್ಕೆಗಳು ಸುಮಾರು ಒಂದು ಸೆಂ.ಮೀ. ನಷ್ಟು ಉದ್ದವಾಗಬಹುದು ಚುಕ್ಕೆಗಳು ಮಧ್ಯಭಾಗದಲ್ಲಿ ಬೂದಿ ಬಣ್ಣ ಅಥವಾ ಬಿಳಿ ಬಣ್ಣವನ್ನು ಹೊಂದಿರುತ್ತವೆ ಕಾಳುಗಳು ಕಂದು ಬಣ್ಣಕ್ಕೆ ತಿರುಗುತ್ತವೆ.

ನಿರ್ವಹಣಾ ಕ್ರಮಗಳು: ರೋಗರಹಿತ ಬೀಜಗಳನ್ನು ಬತ್ತನೆಗೆ ಉಪಯೋಗಿಸಬೇಕು. ರೋಗದ ಲಕ್ಷಣಗಳು ಕಾಣಿಸಿದಾಗ ಪ್ರತಿ ಲೀಟರ್ ನೀರಿಗೆ 2 ಗ್ರಾಂ ಮ್ಯಾಂಕೋಜೆಬ್ 75 ಡಬ್ಲ್ಯೂಪಿ. ಅಥವಾ 1 ಗ್ರಾಂ. ಕಾರ್ಬನ್‌ಡೈಜಿಮ್ 50 ಡಬ್ಲ್ಯೂಪಿ ಬೆರೆಸಿ ಸಿಂಪಡಿಸಬೇಕು. ತೆನೆಯ ಹಂತದಲ್ಲಿ ಮತ್ತೊಮ್ಮೆ ಸಿಂಪಡಿಸಬೇಕು.

- **ಕಾಡಿಗೆ ರೋಗ:** ಒಂದು ತೆನೆಯಲ್ಲಿ ಕೇವಲ ಕೆಲವು ಕಾಳುಗಳು ಮಾತ್ರ ರೋಗದ ಲಕ್ಷಣಗಳನ್ನು ತೋರಿಸುತ್ತವೆ. ಬಣ್ಣದ ಮಸಿಗಳಾಗಿ (ಉಂಡೆಗಳ ಹಾಗೆ) ಮಾರ್ಪಾಡಾಗುತ್ತವೆ. ಇಂತಹ ಮಸಿಗಳು ಶಿಲೀಂಧ್ರದ ಕವಚ ಮತ್ತು ಬೀಜಕಣಗಳನ್ನು ಹೊಂದಿರುತ್ತವೆ.

ನಿರ್ವಹಣಾ ಕ್ರಮಗಳು: ರೋಗರಹಿತ ಬೀಜಗಳನ್ನು ಬತ್ತನೆಗೆ ಉಪಯೋಗಿಸಬೇಕು. ಬೀಜವನ್ನು ಬಿತ್ತುವುದಕ್ಕೆ ಮೊದಲು 520 ಸೆಂ. ಉಷ್ಣಾಂಶವಿರುವ ಬಿಸಿ ನೀರಿನಲ್ಲಿ 10 ನಿಮಿಷ ನೆನೆಸಿ ನಂತರ ಒಣಗಿಸಿ ಬಿತ್ತಬೇಕು. ರೋಗ ಭಾದಿತ ತೆನೆಗಳನ್ನು ತೆಗೆದು ಸುಟ್ಟು ಹಾಕಬೇಕು.

ಇಳುವರಿ:

- ಕಾಳಿನ ಇಳುವರಿ–20–22 ಕ್ವಿಂ/ಎ.
- ಹುಲ್ಲಿನ ಇಳುವರಿ 40–44 ಕ್ವಿಂ/ಎ.

ಲೇಖಕರು

ಶ್ರೀ. ಜಿ.ಜಿ. ವಿಶ್ವನಾಥ
ವಿಷಯ ತಜ್ಞರು (ಬೇಸಾಯ ಶಾಸ್ತ್ರ)

ಶ್ರೀ. ಎಸ್. ಎಂ. ವಾರದ
ವಿಷಯ ತಜ್ಞರು (ಮಣ್ಣು ವಿಜ್ಞಾನ)

ಶ್ರೀಮತಿ. ಶ್ರೀದೇವಿ
ವಿಷಯ ತಜ್ಞರು (ಗೃಹ ವಿಜ್ಞಾನ)

ಡಾ. ಎಸ್. ಎಸ್. ಹಿರೇಮಠ
ವಿಷಯ ತಜ್ಞರು (ಸಸ್ಯ ಸಂರಕ್ಷಣೆ)

ಶ್ರೀ. ಪ್ರವೀಣ ಯಡಹಳ್ಳಿ
ವಿಷಯ ತಜ್ಞರು (ತೋಟಗಾರಿಕೆ)

ಶ್ರೀ. ಶಂಕರಗೌಡ ಎಸ್. ಪಾಟೀಲ
ಕ್ಷೇತ್ರ ವ್ಯವಸ್ಥಾಪಕರು

ಸಂಪಾದಕರು : **ಶ್ರೀ. ಐ.ಆರ್. ಪಾಟೀಲ**
ಅಧ್ಯಕ್ಷರು, ಐಸಿಎಆರ್– ಕೆವಿಕೆ

ಮಟ ವಿನ್ಯಾಸ : **ಶ್ರೀ. ಮಂಜುನಾಥ ಪಿ.ಐ.**
ಗಣಕಯಂತ್ರ ಸಹಾಯಕರು

ಅಕ್ಷರ ಜೋಡಣೆ : **ಶ್ರೀಮತಿ. ವೀಣಾ ಬನ್ನೂರ**
ಬೆರಳಚ್ಚುಗಾರರು

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರು

ಐಸಿಎಆರ್–ಕೆವಿಕೆ ಕೃಷಿ ವಿಜ್ಞಾನ ಕೇಂದ್ರ, ಮತ್ತಿಕೊಪ್ಪ–591 147

ತಾಲೂಕು: ಬೈಲಹೊಂಗಲ, ಜಿಲ್ಲೆ: ಬೆಳಗಾವಿ. ದೂರವಾಣಿ ಸಂಖ್ಯೆ: 9535604747

ಮಿಂಚಂಚೆ: kvk.Belagavi2@icar.gov.in, ಅಂತರ್ಜಾಲ: www.klekvk.org

Shri Bhavani Hubli # 94481 16253

ಕೆಎಲ್ಇ ಸಂಸ್ಥೆಯ

ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ಮತ್ತಿಕೊಪ್ಪ

ಬೈಲಹೊಂಗಲ ತಾಲೂಕು, ಬೆಳಗಾವಿ ಜಿಲ್ಲೆ

ಭತ್ತದ ಬೆಳೆಯಲ್ಲಿ ಸುಧಾರಿತ ಬೇಸಾಯ ಕ್ರಮಗಳು



ಪ್ರತಿಗಳು: 1000

2018–19

ಭತ್ತ

ಭತ್ತವನ್ನು ಜಿಲ್ಲೆಯಲ್ಲಿ ಮಳೆಯಾಶ್ರಿತ ಬೆಳೆಯಾಗಿ 64585 ಹೆ. ಕ್ಷೇತ್ರದಲ್ಲಿ ಬೆಳೆಯಲಾಗುತ್ತಿದ್ದು, ಒಟ್ಟು ಉತ್ಪಾದನೆ 142123 ಟನ್‌ಗಳಷ್ಟಿದ್ದು, ಸರಾಸರಿ ಉತ್ಪಾದಕತೆಯು ಪ್ರತಿ ಎಕರೆಗೆ 2550 ಕೆಜಿ ಆಗಿರುತ್ತದೆ.

ಉತ್ತರ ಅರೆಮಲೆನಾಡು ಪ್ರದೇಶದಲ್ಲಿ ಪಶ್ಚಿಮದ ಹೆಚ್ಚು ಮಳೆ ಬೀಳುವ ಬೆಳಾವಿ ಮತ್ತು ಬೈಲಹೊಂಗಲ ತಾಲೂಕುಗಳಲ್ಲಿ ಮಳೆಯಾಶ್ರಿತ ಮುಂಗಾರಿನಲ್ಲಿ ಕೂರಿಗೆಯಿಂದ ಭತ್ತವನ್ನು ಬಿತ್ತಿ ಬೆಳೆಯಲಾಗುತ್ತಿದೆ. ಮಲೆನಾಡು ಪ್ರದೇಶದಲ್ಲಿ ಪ್ರಧಾನ ಬೆಳೆಯಾಗಿ ಮಳೆಯಾಶ್ರಿತ ಮುಂಗಾರಿನಲ್ಲಿ ಖಾನಾಪೂರ ತಾಲೂಕಿನಲ್ಲಿ ಬೆಳೆಯಲಾಗುತ್ತಿದೆ.

ತಳಿಗಳು:



ತಳಿಗಳು	ವಲಯ/ಸನ್ನಿವೇಶ	ಬಿತ್ತನೆ ತಿಂಗಳು	ಅವಧಿ (ದಿನಗಳು)/ತಳಿ ವಿಶೇಷತೆ
ಎಮ್‌ಟಿಯು-1001	ಉತ್ತರ ಅರೆಮಲೆನಾಡು/ಮಳೆಯಾಶ್ರಿತ (ಮಧ್ಯಮ ಮಾಲಿ ಭೂಮಿಗೆ)	ಜೂನ್	130-135 ದಿನಗಳು, ಮಧ್ಯಮ ಕಾಂಡ ಗಾತ್ರ ಮತ್ತು ಸ್ಥಿ
ಐಆರ್-7564	ಉತ್ತರ ಅರೆಮಲೆನಾಡು/ಮಳೆಯಾಶ್ರಿತ (ಮಾಲಿ ಭೂಮಿಗೆ)	ಜೂನ್	100-105 ದಿನಗಳು, ಕಾಳು ಉದ್ದವಾಗಿದ್ದು ಸ್ಥಿರವಾಗಿರುತ್ತದೆ
ಐಆರ್-13549 (ಮುಗದ ಸೂಗಂದ)	ಉತ್ತರ ಅರೆಮಲೆನಾಡು/ಮಳೆಯಾಶ್ರಿತ (ಮಧ್ಯಮ ಮಾಲಿ ಭೂಮಿಗೆ)	ಜೂನ್	130-135 ದಿನಗಳು, ಕಾಳು ಉದ್ದವಾಗಿದ್ದು ಸ್ಥಿರವಾಗಿರುತ್ತದೆ ಮತ್ತು ಸುವಾಸನೆಯಿಂದ ಕೂಡಿರುತ್ತದೆ
ಎಮ್‌ಜಿಡಿ-101	ಉತ್ತರ ಅರೆಮಲೆನಾಡು/ಮಳೆಯಾಶ್ರಿತ (ಮಾಲಿ ಭೂಮಿಗೆ ಕೂರಿಗೆ ಬಿತ್ತನೆ)	ಜೂನ್	125-130 ದಿನಗಳು, ಮಧ್ಯಮ ಕಾಂಡ ಗಾತ್ರ ಮತ್ತು ದಪ್ಪ
ಮುಗದ ಸಿಡಿ-1253	ಉತ್ತರ ಅರೆಮಲೆನಾಡು/ಮಳೆಯಾಶ್ರಿತ (ಮಧ್ಯಮ ಮಾಲಿ ಭೂಮಿಗೆ)	ಜೂನ್	135-140 ದಿನಗಳು, ಮಧ್ಯಮ ಕಾಂಡ ಗಾತ್ರ ಮತ್ತು ಸ್ಥಿ
ಸಿಡಿ-1253	ಉತ್ತರ ಅರೆಮಲೆನಾಡು/ಮಳೆಯಾಶ್ರಿತ (ಮಧ್ಯಮ ಮಾಲಿ ಭೂಮಿಗೆ)	ಜೂನ್	135-140 ದಿನಗಳು, ಮಧ್ಯಮ ಕಾಂಡ ಗಾತ್ರ ಮತ್ತು ಸ್ಥಿ

ಬಿತ್ತನೆ ಬೀಜ – 32 ರಿಂದ 40 ಕಿ.ಗ್ರಾಂ.
ಕೊಟ್ಟಿಗೆ ಗೊಬ್ಬರ – 2.0-2.8 ಟನ್
ರಾಸಾಯನಿಕ ಗೊಬ್ಬರ – 40:20:20 ಸಾ:ರಂ:ಪೊ
– 8 ಕಿ.ಗ್ರಾಂ ಸತುವಿನ ಸಲ್ಫೇಟ್

ಕೂರಿಗೆ ಬಿತ್ತನೆ:

ಸರಿಯಾಗಿ ಹದ ಮಾಡಿದ ಕ್ಷೇತ್ರದಲ್ಲಿ 20 ಸೆಂ.ಮೀ. ಸಾಲುಗಳಲ್ಲಿ ಕೂರಿಗೆಯಿಂದ ಎಕರೆಗೆ 40 ಕೆಜಿ ಬೀಜಗಳನ್ನು ಸಮನಾಗಿ ಬಿತ್ತನೆ ಮಾಡಬೇಕು.

ಡ್ರಮ್ ಸೀಡರ್‌ನಿಂದ ಬಿತ್ತನೆ:

ಸತತ ಮಳೆ ಅಥವಾ ಇತರೆ ಕಾರಣಗಳಿಂದ ಮೇ ಹಾಗೂ ಜೂನ್ ತಿಂಗಳಿನಲ್ಲಿ ಬಿತ್ತನೆ ಸಾಧ್ಯವಾಗದಿದ್ದರೆ, ಬಿಲ್ಕೈನಲ್ಲಿ ಕೆಸರು ಗದ್ದೆ ಮಾಡಬಹುದಾದಷ್ಟು ಮಳೆಯಾದ ಮೇಲೆ ಡ್ರಮ್ ಸೀಡರ್‌ನಿಂದ ಬಿತ್ತನೆ ಮಾಡಲು ಮೊಳಕೆ ಬಂದ ಭತ್ತದ ಬೀಜಗಳನ್ನು ಉಪಯೋಗಿಸಬೇಕು. ಡ್ರಮ್ ಸೀಡರ್ ಬಿತ್ತನೆಗೆ ಎಕರೆಗೆ 16 ಕೆಜಿ ಬೀಜ ಬೇಕಾಗುವುದು.

ನೀರು ನಿರ್ವಹಣೆ:

ನಾಟಿ ಮಾಡಿದ ನಂತರ ಮೊದಲಿನ ಹತ್ತು ದಿನಗಳ ವರೆಗೆ ಗದ್ದೆಯಲ್ಲಿರುವ ನೀರಿನ 2.5 ಸೆಂ.ಮೀ. ಗೆ ಮಿತಗೊಳಿಸಿ, ನಂತರ 5 ಸೆಂ.ಮೀ. ಗೆ ಹೆಚ್ಚಿಸಿ, ಕೊಯ್ಲಿಗೆ 10 ದಿನ ಮೊದಲು ನೀರನ್ನು ಬಸಿದು ತೆಗೆಯಬೇಕು. ಹೂಡೆಯಾಡುವ ಸಮಯದಿಂದ ತೆನೆ ಹೊರಬರುವವರೆಗೆ ನೀರಿನ ಮಟ್ಟದಲ್ಲಿ ಯಾವ ಬದಲಾವಣೆಯನ್ನು ಮಾಡಬಾರದು.

ಕೂರಿಗೆ ಭತ್ತದ ಬಿತ್ತನೆ ನಂತರ 10-15 ದಿನಗಳ ವರೆಗೆ ಹೆಚ್ಚಿನ ಮಳೆಯಿಂದ ನೀರು ನಿಲ್ಲದಂತೆ ಎಚ್ಚರವಹಿಸಬೇಕು. ಮರಿ ಒಡೆಯುವ ಅವಧಿ ಮುಗಿಯುವವರೆಗೆ 2.5 ಸೆಂ.ಮೀ. ಗಿಂತ ಹೆಚ್ಚು ನೀರು ನಿಲ್ಲದಂತೆ ನೋಡಿಕೊಳ್ಳಬೇಕು. ಬಿತ್ತಿದ 40 ದಿನಗಳ ಅವಧಿಯಲ್ಲಿ ಗದ್ದೆಯಲ್ಲಿ ಸಾಕಷ್ಟು ನೀರು ನಿಲ್ಲುವಂತಾದಾಗ ಹೊಡೆತ ಮಾಡಿ ನೀರು ಕ್ಯುಬೇಕು. ಈ ರೀತಿ ನೀರು ಕ್ಯುವುದರಿಂದ ಸಣ್ಣ ಕಳೆಗಳೆಲ್ಲ ನಾಶವಾಗಿ, ನಂತರ ಕಳೆಗಳ ಪೈಪೋಟಿ ಇಲ್ಲದಂತಾಗುವುದು. ಕೂರಿಗೆ ಭತ್ತವು ಪೂರ್ತಿ ಮಳೆಯಾಶ್ರಿತದಲ್ಲಿದ್ದಾಗ ಕಡಿಮೆ ಆಳದ ನೀರು ನಿಲ್ಲಿಸುವ ಪದ್ಧತಿ ಅನುಸರಿಸಿದರೆ ಮುಂದೆ ಮಳೆಯ ಕೊರತೆಯಾಗಿ ನೀರಿನ ಅಭಾವ ಆಗುವ ಸಂಭವವಿರುವುದರಿಂದ ಹೆಚ್ಚಿಗೆ ಸಂಗ್ರಹಿಸುವುದು ಸೂಕ್ತ. ಆದರೆ ನೀರಿನ ಆಳ, ಬೆಳೆಯ ಯಾವುದೇ ಹಂತದಲ್ಲಿ ಬೆಳೆಯ ಎತ್ತರದ ಶೇ. 25 ಕ್ಕಿಂತ ಹೆಚ್ಚಿರದಂತೆ ನೋಡಿಕೊಳ್ಳಬೇಕು. ಕೊನೆ ಎಲೆಯ (ಬೂಟ್ ಲೀಫ್) ಹಂತದಲ್ಲಿ ಒಂದು ಸಲ ನೀರು ಕೊಡಬೇಕು.

ಅಂತರ ಬೇಸಾಯ:

ಕೂರಿಗೆ ಭತ್ತದಲ್ಲಿ ಬಿತ್ತನೆಯಾದ 15 ದಿನಗಳ ನಂತರ ಹದ ಸಿಕ್ಕಾಗ ಒಂದು ವಾರದ ಅಂತರದಲ್ಲಿ 2-3 ಸಲ ಎಡೆಕುಂಟೆ ಹೊಡೆಯುವುದರಿಂದ ಕಳೆ ನಿಯಂತ್ರಣವಾಗಿ ಮಣ್ಣಿನಲ್ಲಿರುವ ತೇವಾಂಶವನ್ನು ಕಾಪಾಡುತ್ತದೆ. ಬಿತ್ತನೆಯಾದ 40 ದಿನಗಳ ನಂತರ ಗದ್ದೆಯಲ್ಲಿ ನೀರು ನಿಂತಾಗ ಕೊನೆಯ ಬಾರಿ ಎಡೆಕುಂಟೆ ಹೊಡೆದು ನಂತರ ದೋಣಿ ತಿಕ್ಕುವುದರಿಂದ (ಹೊಡೆತ ಮಾಡುವುದು) ಕಳೆಗಳು ನಾಶವಾಗಿ ಮರಿ ಒಡೆಯುವುದಕ್ಕೆ ಅನುಕೂಲವಾಗುವುದು. ಇದಲ್ಲದೆ ಮೇಲ್ಭಾಗದ ಮಣ್ಣಿನ ಬಿಗಿತದಿಂದಾಗಿ ನೀರು ಬಸಿಯದಂತೆ ಸಂಗ್ರಹಿಸಲು ಸಾಧ್ಯವಾಗುತ್ತದೆ.

ಕಳೆನಿಯಂತ್ರಣ:

ಕಳೆನಾಶಕ	ಪ್ರಮಾಣ (ಎಕರೆಗೆ)	ಸಿಂಪರಣೆ (ಸಮಯ)	ನಿಯಂತ್ರಣವಾಗುವ ಕಳೆ
ನಾಟಿ ಭತ್ತ 2,4-ಡಿ ಸೋಡಿಯಂ ಉಪ್ಪು-80 ಡಬ್ಲ್ಯೂ ಪಿ	1 ಕೆಜಿ	ನಾಟಿ ಮಾಡಿದ 3-4 ವಾರಗಳು	ದ್ವಿದಳ ಕಳೆಗಳು ಹಾಗೂ ವಾರ್ಷಿಕ ಹುಲ್ಲು
ಬ್ಯೂಟಾಕ್ಲೋರ್ ಶೇ. 5 ರ ಹರಳು	12 ಕೆಜಿ	ನಾಟಿಯಾದ 5-7 ದಿನಗಳಲ್ಲಿ ಗದ್ದೆಯಲ್ಲಿ ಉದುರಿಸುವುದು	
ಥೈಯೋಬೆನ್‌ಕಾರ್ಬ್ (ಬೆನ್‌ಥಿಯೋಕಾರ್ಬ್ 50 ಇಸಿ)	1.6 ಲೀಟರ್	ನಾಟಿಯಾದ 5 ದಿನಗಳಲ್ಲಿ ಸಿಂಪಡಿಸಬೇಕು	
ಬೆನ್‌ಸೆಲ್ಫುರಾನ್ ಮಿಥೆಲ್ 0.6% + ಪ್ರೆಟಿಲಾಕ್ಲೋರ್ 6% ಜಿ	5 ಕೆಜಿ	ನಾಟಿಯಾದ 3-5 ದಿನಗಳ ನಂತರ ಸಿಂಪಡಿಸಬೇಕು	ಜೇಕು, ಹುಲ್ಲಿನ ಮತ್ತು ದ್ವಿದಳ ಜಾತಿಯ ಕಳೆಗಳು
ಬಿಸ್‌ಪೈರಿಬ್ಯಾಕ್ ಸೋಡಿಯಂ 10 % ಎಸ್.ಸಿ	100 ಮಿ.ಲೀ.	ನಾಟಿಯಾದ 3-4 ವಾರಗಳಲ್ಲಿ ಸಿಂಪಡಿಸಬೇಕು	ವಾರ್ಷಿಕ ಹುಲ್ಲು ಮತ್ತು ದ್ವಿದಳ ಕಳೆಗಳು
ಪೈರಜೋಸಲ್ಫುರಾನ್ ಈಥೈಲ್ 10 ಡಬ್ಲ್ಯೂ ಪಿ	80 ಗ್ರಾಂ.	ನಾಟಿಯಾದ 3-7 ದಿನಗಳ ಒಳಗಾಗಿ	ದ್ವಿದಳ ಮತ್ತು ವಿವಿಧ ಜಾತಿಯ ಕಳೆಗಳು
ಕೂರಿಗೆ ಭತ್ತ ಪೆಂಡಿಮಿಥಾಲಿನ್ 30 ಇಸಿ	1.3 ಲೀಟರ್	ಬಿತ್ತನೆಯಾದ 5 ದಿನಗಳಲ್ಲಿ	ಹುಲ್ಲು ಜಾತಿಯ ಕಳೆಗಳು
ಬ್ಯೂಟಾಕ್ಲೋರ್ 50 ಇಸಿ	1.2 ಲೀಟರ್	ಬಿತ್ತನೆಯಾದ 5 ದಿನಗಳಲ್ಲಿ	

ಸಸ್ಯ ಸಂರಕ್ಷಣಾ ಕ್ರಮಗಳು

ಕೀಟಗಳು:

- **ಥ್ರೀಪ್ಸ್ :** ಭತ್ತದ ಸಸಿ ಮಡಿಯಲ್ಲಿ ನೀರು ಕಡಿಮೆಯಾದ ಸಂದರ್ಭದಲ್ಲಿ ಕೀಟದ ಹಾವಳಿ ಹೆಚ್ಚು. ಥ್ರೀಪ್ಸ್‌ಗಳು ತುಂಬಾ ಚಿಕ್ಕದಾಗಿದ್ದು ಕಪ್ಪು ಬಣ್ಣವನ್ನು ಹೊಂದಿರುತ್ತವೆ. ಸಸಿಗಳ ರಸವನ್ನು ಹೀರುವುದರಿಂದ ಸಸಿಗಳು ಅಲ್ಲಲ್ಲಿ ಸುಟ್ಟಂತೆ ಕಾಣುತ್ತವೆ.

ನಿರ್ವಹಣಾ ಕ್ರಮ: ಸಸಿಮಡಿಗೆ (300 ಚ.ಮೀ. ಪ್ರದೇಶಕ್ಕೆ) 75 ಗ್ರಾಂ ಶೇ 10 ರ ಫೋರೇಟ್ ಅಥವಾ 1.25 ಕಿ.ಗ್ರಾಂ ಶೇ 3 ರ ಕಾರ್ಬೋಫ್ಯೂರಾನ್ ಹರಳನ್ನು ಬಿತ್ತನೆಗೆ ಮುಂಚೆ ಮಣ್ಣಿನಲ್ಲಿ ಬೆರೆಸಿ ನೀರು ಹಾಯಿಸಬೇಕು ಅಥವಾ ಮೊನೊಕ್ರೋಟೋಫಾಸ್ 36 ಎಸ್.ಎಲ್ ಪ್ರತಿ ಲೀಟರ್ ನೀರಿಗೆ 1.3 ಮಿ.ಲೀ.ನಂತೆ ಬೆರೆಸಿ ಸಿಂಪಡಿಸಬೇಕು.

- **ಕಂದು ಜಿಗಿಹುಳುಗಳು:** ಕೀಟವು ಬೆಣೆ ಆಕಾರದಲ್ಲಿದ್ದು, ಕಂದು ಬಣ್ಣ ಹೊಂದಿರುತ್ತದೆ. ಪ್ರೌಢ ಮತ್ತು ಅಪ್ಸರೆಗಳು ಕಾಂಡವನ್ನು ನೀರಿನ ಮಟ್ಟಕ್ಕಿಂತ ಮೇಲ್ಭಾಗದಲ್ಲಿ ಅಧಿಕ ಸಂಖ್ಯೆಯಲ್ಲಿ ಆವರಿಸಿ ರಸ ಹೀರುತ್ತವೆ. ಈ ಕೀಟದ ಬಾಧೆಯಿಂದಾಗಿ ಒಂದು ವಾರದಲ್ಲಿ ಇಡೀ ಬೆಳೆಯೇ ನಾಶವಾಗುತ್ತದೆ. ಇದರ ಬಾಧೆಯು ತೆನೆ ಬರುವ ಸಮಯದಲ್ಲಿ ತೀವ್ರವಾಗಿರುತ್ತದೆ.

ನಿರ್ವಹಣಾ ಕ್ರಮಗಳು: ಎಕರೆಗೆ 4 ಕಿ.ಗ್ರಾಂ. ಶೇ 3 ರ ಕಾರ್ಬೋಫ್ಯೂರಾನ್ ಅಥವಾ 5 ಕಿ.ಗ್ರಾಂ. ಶೇ. 10 ರ ಫೋರೇಟ್ ಅಥವಾ 12 ಕಿ.ಗ್ರಾಂ. ಶೇ 4 ರ ಕ್ವಿನಾಲ್‌ಫಾಸ್ ಹರಳನ್ನು ಮಣ್ಣಿನಲ್ಲಿ ಹಾಕಬೇಕು. ನಂತರ 72 ತಾಸುಗಳವರೆಗೆ ನೀರು ಒಂದು ಗದ್ದೆಯಿಂದ ಇನ್ನೊಂದು ಗದ್ದೆಗೆ ಹೋಗದಂತೆ ನೋಡಿಕೊಳ್ಳಬೇಕು. 0.2 ಗ್ರಾಂ. ಥಯಾಮೆಥಾಕ್ಸಾಮ್ 25 ಡಬ್ಲ್ಯೂಜಿ ಅಥವಾ 0.3 ಮಿ.ಲೀ. ಇಮಿಡಾಕ್ಲೋಪ್ರಿಡ್ 17.8 ಎಸ್.ಎಲ್ 1 ಲೀಟರ್ ನೀರಿನಲ್ಲಿ ಬೆರೆಸಿ ಪೈರಿನ ಬುಡದಲ್ಲಿ ಸಿಂಪರಣೆ ಮಾಡಬೇಕು. ಅವಶ್ಯಕತಾನುಗುಣವಾಗಿ ಸಿಂಪಡಿಸಬೇಕು. ಪ್ರತಿ ಎಕರೆಗೆ 200-250 ಲೀ. ಸಿಂಪರಣಾ ದ್ರಾವಣಬೇಕು. ನಾಟಿ ಮಾಡಿದ 30 ದಿವಸಗಳ ನಂತರ ಪ್ರತಿನ ವಾರಕ್ಕೊಮ್ಮೆ ಗಿಡಗಳ ಬುಡದಲ್ಲಿ ಈ ಕೀಟದ ಇರುವಿಕೆಯನ್ನು ಗಮನಿಸಬೇಕು. ಸಾರಜನಕಯುಕ್ತ ಗೊಬ್ಬರಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸಬಾರದು.